

# ಎಂಜಿನಿಯರಿಂಗ್ ರೀತಿ ನಟನೆಯ ವ್ಯಾಖ್ಯಾನ ಕಷ್ಟ..

## ರಂಗಮುಖಿ ಶ್ರದ್ಧಾ

ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ ಹೀಗೆ ಹಲವು ಭಾಷೆಗಳ ಸಿನಿಮಾದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ ನಟಿ ಶ್ರದ್ಧಾ ಶ್ರೀನಾಥ್. ರಂಗಭೂಮಿ ಹಿನ್ನೆಲೆ ಇರುವ ಈ ಬೆಡಗಿಗೆ ಮತ್ತೆ ಅಲ್ಲಿಗೇ ಮರಳುವ ಇಂಗಿತವೂ ಇದೆ.

■ ಪದ್ಮನಾಭ ಭಟ್



**●ಯಾವ ಸಿನಿಮಾಗಳ ಕೆಲಸದಲ್ಲಿದ್ದೀರಿ?**

ಒಪ್ಪಿಕೊಂಡ ಸಿನಿಮಾಗಳ ಚಿತ್ರೀಕರಣಗಳು ಮುಗಿದಿವೆ. ಹಿಂದಿಯ 'ಮಿಲನ್ ಟಾಕೀಜ್', 'ರುಸ್ತುಂ' ಸಿನಿಮಾದ ಮಾತಿನ ಭಾಗದ ಚಿತ್ರೀಕರಣ ಮುಗಿದಿದೆ. ಹಾಡಿನ ಭಾಗ ಮಾತ್ರವೇ ಬಾಕಿ ಇದೆ. ತಮಿಳಿನಲ್ಲಿ 'ಕೆ 13' ಸಿನಿಮಾವೂ ಮುಗಿದಿದೆ.

**●ಚಿತ್ರರಂಗಕ್ಕೆ ಬಂದು ಮೂರ್ನಾಲ್ಕು ವರ್ಷಗಳಾಯ್ತು. ಹಾಗೆ ನೋಡಿದರೆ ಬಿಡುಗಡೆಯಾಗಿರುವ ನಿಮ್ಮ ಚಿತ್ರಗಳ ಸಂಖ್ಯೆ ಕಡಿಮೆಯೇ ಅಲ್ಲವೇ?**

ಬಂದ ಸಿನಿಮಾಕ್ಕೆಲ್ಲ ಸಹಿ ಮಾಡುವುದಿಲ್ಲ. ಎಚ್ಚರಿಕೆಯಿಂದ ಸಿನಿಮಾಗಳನ್ನು ಆಯ್ದುಕೊಳ್ಳುತ್ತೇನೆ. ಬಂದ ಹತ್ತು ಅವಕಾಶಗಳಲ್ಲಿ ಒಂದು ಇಷ್ಟವಾದರೆ ಅದನ್ನು ಮಾಡುತ್ತೇನೆ. ಅಲ್ಲದೆ ನನ್ನ ಕೆಲಸ ಈಗ ಕನ್ನಡ, ತಮಿಳು, ತೆಲುಗು ಹೀಗೆ ಹಲವು ಕಡೆಗಳಲ್ಲಿ ಹಂಚಿಹೋಗಿದೆ.

**●ಹಲವು ಭಾಷೆಗಳ ಸಿನಿಮಾಗಳನ್ನು ನೀವು ಹೇಗೆ ನಿಭಾಯಿಸುತ್ತೀರಿ?**

ನಿಭಾಯಿಸುವುದು ಅಂತೇನಿಲ್ಲ. ನನಗೆ ಭಾಷೆ ಒಂದು ಸಮಸ್ಯೆ ಅನಿಸಿಯೇ ಇಲ್ಲ. ಆದರೆ ಒಂದು ಪಾತ್ರದಿಂದ ಇನ್ನೊಂದು ಪಾತ್ರಕ್ಕೆ ಜಂಪ್ ಮಾಡುವುದು ನನಗೆ ಅಷ್ಟು ಇಷ್ಟ ಇಲ್ಲ. ಆದರೆ ಕೆಲಸದ ರೀತಿಯೇ ಹಾಗಿರುತ್ತದೆ. ಒಂದು ವಾರ ಇಲ್ಲಿ ಚಿತ್ರೀಕರಣ ಇರುತ್ತದೆ, ಇನ್ನೊಂದು ವಾರ ಬೇರೆ ಕಡೆ. ಏನೂ ಮಾಡಲಾಗುವುದಿಲ್ಲ. ಕಲಾವಿದೆಯಾಗಿ ಅದನ್ನು ಹೇಗೆ ಮ್ಯಾನೇಜ್ ಮಾಡಬೇಕು ಎನ್ನುವುದನ್ನು ಕಲಿತುಕೊಳ್ಳಬೇಕು.

**●ಒಂದು ಪಾತ್ರಕ್ಕೆ ನಿಮ್ಮನ್ನು ನೀವು ಹೇಗೆ ಸಿದ್ಧಪಡಿಸಿಕೊಳ್ಳುತ್ತೀರಿ?**

ಸಿದ್ಧತೆ ಎನ್ನುವುದು ಪ್ರತಿ ಪಾತ್ರಕ್ಕೂ ಪ್ರತಿ ಕಲಾವಿದರಿಗೂ ಬದಲಾಗುತ್ತ ಹೋಗುತ್ತದೆ. ನನಗೆ ಬರವಣಿಗೆಯಿಂದ ತುಂಬ ಸಹಾಯವಾಗುತ್ತದೆ. ನಾನು ನನ್ನ ಪಾತ್ರದ ಕುರಿತು ಬರೆಯುತ್ತೇನೆ. ಅದರ ಲಕ್ಷಣಗಳನ್ನು ಓದಿದರೆ ಆಯಾ ಪಾತ್ರಕ್ಕೆ ಮರಳುತ್ತೇನೆ.

**●ಮಾಧವನ್, ವಿಜಯ್ ಸೇತುಪತಿ, ಶಿವರಾಜ್‌ಕುಮಾರ್ ಅವರಂಥ ಹಿರಿಯ ನಟರ ಜತೆಯಲ್ಲಿ ನಟಿಸಿದ್ದೀರಿ. ಇದರಿಂದ ನಟಿಯಾಗಿ ನಿಮಗೆ ಯಾವ ರೀತಿಯಲ್ಲಿ ಸಹಾಯವಾಗಿದೆ?**

ಎಲ್ಲರಿಂದಲೂ ಏನೋ ಕಲಿಯುವುದಕ್ಕೆ ಇರುತ್ತದೆ. ದೊಡ್ಡ ನಟರ ಜತೆ ನಟಿಸಿದಾಗ ನನ್ನಲ್ಲೇ ಒಂದು ಆತ್ಮವಿಶ್ವಾಸ ಹುಟ್ಟಿಕೊಂಡಿದೆ. ತುಂಬ ಜನರು 'ಅಷ್ಟು ದೊಡ್ಡ ನಟರ ಜತೆ ನಟಿಸುವಾಗ ನಿಮಗೆ ನರ್ವಸ್ ಆಗಲ್ವಾ' ಎಂದು ಕೇಳುತ್ತಿರುತ್ತಾರೆ. ನನಗೆ ಯಾವತ್ತೂ ಹಾಗೆನಿಸಿಲ್ಲ. ನಾನು ಅವರನ್ನು ಸ್ಟಾರ್‌ಗಳ ಥರ ನೋಡಲ್ಲ; ಸಹಕಲಾವಿದರ ಥರ ನೋಡ್ತೇನೆ. ಅವರೂ ನನ್ನನ್ನು ಹಾಗೆಯೇ ನೋಡುತ್ತಾರೆ.

**●ಇಷ್ಟು ವರ್ಷದ ನಟನಾ ಅನುಭವದ ನಂತರ ನಟನೆಯ ಕುರಿತಾದ ನಿಮ್ಮ ವ್ಯಾಖ್ಯಾನದ ಬದಲಾಗಿದೆಯೇ?**

ನಾನು ರಂಗಭೂಮಿಯಲ್ಲಿದ್ದಾಗ ಯಾರೂ ನನ್ನನ್ನು ನಟನೆ ಎಂದರೆ ಏನು ಅಂತಲೇ ಕೇಳುತ್ತಿರಲಿಲ್ಲ. ನಾನೂ ಅದರ ಕುರಿತು ಯೋಚಿಸುತ್ತಿರಲಿಲ್ಲ. ಸುಮ್ಮನೆ ನಟಿಸುತ್ತಿದ್ದೆ ಅಷ್ಟೆ. ಈಗಲೂ ನಟನೆ ಎಂದರೆ ಏನು ಎನ್ನುವುದರ ಕುರಿತು ತಲೆಕೆಡಿಸಿಕೊಳ್ಳುವುದಿಲ್ಲ. ಸಾಫ್ಟ್‌ವೇರ್ ಎಂಜಿನಿಯರಿಂಗ್ ಅಂದರೆ ಏನು ಎಂದು ಒಂದು ವ್ಯಾಖ್ಯಾನ ಕೊಡಬಹುದು. ನಟನೆಯನ್ನು ಹಾಗೆ ವ್ಯಾಖ್ಯಾನಿಸುವುದು ಕಷ್ಟ.

**●ಮುಂದೆ ನಿರ್ದೇಶನಕ್ಕಿಳಿಯುವ ಆಸಕ್ತಿ ಇದೆಯೇ?**

ಖಂಡಿತ ನಿರ್ದೇಶಿಸುತ್ತೇನೆ. ಆದರೆ ಸಿನಿಮಾ ಅಲ್ಲ. ನಾಟಕ ನಿರ್ದೇಶನ ಮಾಡಬೇಕು ಎನ್ನುವ ಆಸೆ ಇದೆ. ಸಿನಿಮಾ ನಿರ್ದೇಶನ ನನಗೆ ಬರುವುದಿಲ್ಲ; ಕಲಿಯುವ ಆಸಕ್ತಿಯೂ ಇಲ್ಲ. ಈಗಲೂ ನಾನು ರಂಗಭೂಮಿಯನ್ನು ಮಿಸ್ ಮಾಡಿಕೊಳ್ಳುತ್ತೇನೆ. ಸಿನಿಮಾ ಜೀವನ ಯಾವಾಗ ಮುಗಿಯುತ್ತದೋ, ಮುಗಿಯುವುದಿಲ್ಲವೋ ಗೊತ್ತಿಲ್ಲ. ■